


ಕಥೆ: ಸತ್ಯಾಗಾಲಂ ಪಾರ್ಥಸಾರಥಿ; ಚಿತ್ರ: ಶ್ರೀಕಾಂತ ಆಚಾರ್ಯ

ಒಬ್ಬ ಮಹಾ ಶಿವಭಕ್ತ ಇದ್ದನಂತೆ. ಅವನಿಗೆ ಕೇವಲ ಶಿವ ಮಾತ್ರ ದೇವರು. ಬೇರೆ ಯಾವ ದೇವರನ್ನೂ ಅವನು ನಂಬುತ್ತಿರಲಿಲ್ಲ. ಒಂದು ದಿನ ಅವನಿಗೆ ದಾರಿಯಲ್ಲಿ ಹೋಗುವಾಗ ಒಂದು ಹರಿ-ಹರ ದೇವರ ಮೂರ್ತಿ ಸಿಕ್ಕಿತಂತೆ. ಅದನ್ನು ಅಲ್ಲೇ ಬಿಟ್ಟು ಹೋಗುವ ಅಂದರೆ ಅರ್ಧ ಶಿವನ ಮೂರ್ತಿ ಇದೆ. ಅವನು ಶಿವನ ಪರಮ ಭಕ್ತ, ಆದರೆ ಹರಿಯನ್ನು ಪೂಜಿಸಲು ಇಷ್ಟವಿಲ್ಲ. ಕೊನೆಗೆ ವಿಗ್ರಹವನ್ನು ಮನೆಗೆ ತಂದು ಪೂಜೆ ಮಾಡಲು ಪ್ರಾರಂಭ ಮಾಡಿದನಂತೆ. ಹರಿಹರ ಮೂರ್ತಿಯ ಮಧ್ಯಕ್ಕೆ ನೇರವಾಗಿ ಒಂದು ದಾರವನ್ನು ಇಳಿಬಿಟ್ಟು ಕೇವಲ ಹರನಿರುವ ಭಾಗಕ್ಕೆ ಮಾತ್ರ ಪೂಜೆ ಮಾಡಲು ಪ್ರಾರಂಭ ಮಾಡಿದನಂತೆ. ಕೊನೆಯಲ್ಲಿ ಗಂಧದ ಕಡ್ಡಿ ಹಚ್ಚಿದಾಗ ಅದರ ಪರಿಮಳ ಹರಿಯ ಮೂಗಿನ ಕಡೆಗೆ ಹೋಗಲು ಪ್ರಾರಂಭವಾಯಿತು! ಏನು ಮಾಡುವುದೆಂದು ಯೋಚಿಸಿ ಸ್ವಲ್ಪ ಹತ್ತಿ ತಂದು ಹರಿಯ ಮೂಗಿನ ಹೊಳ್ಳೆಗೆ ಗಟ್ಟಿಯಾಗಿ ತುರುಕಿದನಂತೆ. ಆಗ ಹರಿ ಪ್ರತ್ಯಕ್ಷವಾಗಿ "ಅಯ್ಯಾ ಭಕ್ತ ಮಹಾಶಯ! ದಯವಿಟ್ಟು ನನ್ನನ್ನು ಇಲ್ಲಿಂದ ಬಿಡುಗಡೆ ಮಾಡು", ಎಂದು ವಿನಂತಿಸಿಕೊಂಡನಂತೆ. ಆಗ ಭಕ್ತ "ನಾನು ನಿನ್ನನ್ನು ಪ್ರಾರ್ಥಿಸಲೇ ಇಲ್ಲವಲ್ಲ" ಎಂದನಂತೆ. ಆಗ ಹರಿ, "ನೀನು ಆ ವಿಗ್ರಹದಲ್ಲಿ ನಾನು ಖಂಡಿತ ಇದ್ದೇನೆಂದು ಭಾವಿಸಿದ್ದೆಯಲ್ಲ. ನನಗೆ ಅಷ್ಟೇ ಸಾಕು" ಎಂದು ಹೇಳಿ, ಅವನಿಗೆ ಆಶೀರ್ವದಿಸಿ ಅದೃಶ್ಯನಾದನಂತೆ.

✪

